Let it be connected with the Medical College or the K. R. Hospital, but a Neurosurgical Department should be opened as soon as possible.

ಶ್ರೀ ಹೆಚ್. ಎಲ್.— ತಿಮ್ಮೇಗೌಡ.— ನರ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಮೈಸೂರಿನಲ್ಲಾಗಲೀ ಹುಬ್ಬಳ್ಳಿಯಲ್ಲಾಗಲೀ, ಗುಲ್ಬರ್ಗದಲ್ಲಾಗಲೀ ತೆರೆಯಬೇಕಾದುದು ಅಗತ್ಯ ಎಂಬುದು ಸರ್ಕಾರದ ಮನಸ್ಸಿನಲ್ಲಿ ಕೂಡ ಇದೆ. ಎಲ್ಲಾ ಕಡೆಗೂ ವೈದ್ಯರನ್ನು ಪೋಸ್ಟ್ ಮಾಡಬೇಕೆಂದಿದ್ದೇವೆ. ಆದರೆ ತರಬೇತಿ ಹೊಂದಿದ ವೈದ್ಯರು ಸಿಗುತ್ತಿಲ್ಲ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಸಿಕ್ಕಿದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ರೀತಿಯಾದರೂ ಸಿಕ್ಕಿದರೆ ಆದಷ್ಟು ಜಾಗ್ರತೆ ಆ ವಿಭಾಗವನ್ನು ಆರಂಭಿಸುತ್ತೇವೆ.

ಶ್ರೀ ಬಿ. ರಾಚಯ್ಯ.— ಈ ಪ್ರಶ್ನೆ ಡಿಪಿಎ ಆರ್.ಗೆ ಸಂಬಂಧಪಟ್ಟದ್ದು. ಇದಕ್ಕೆ ಮುಖ್ಯ ಮಂತ್ರಿಗಳೇ ಉತ್ತರ ಕೊಡಬೇಕು.

ಅಧ್ಯಕ್ಷರು.— ಪ್ರಶ್ನೆ ನಂ. ೨೭೦ (೬೬) ಮುಂದೆ ತೆಗೆದುಕೊಳ್ಳೋಣ.

ಕರಾವಳಿ ಮೀನಿನ ಸಂಪನ್ಮೂಲ.

೧೨೧. ಶ್ರೀ ಮೊಹಮ್ಮದ್ ಮೊಹಿನುದ್ದೀನ್. (ಚಾಮರಾಜಪೇಟೆ) ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು. ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಕರಾವಳಿಯ ಮೀನು ಸಂಪತ್ತಿನ ಸಮೀಕ್ಷೆ ನಡೆಸಿದೆಯೇ ? (೧) ಹಾಗಾದಲ್ಲಿ, ಸಿಗುವ ಮೀನಿನ ಸಂಪನ್ಮೂಲ ಎಷ್ಟು ? ಮತ್ತು ಹಿಡಿಯುತ್ತಿರುವ ಸಂಪನ್ಮೂಲದ ಪ್ರಮಾಣ ಎಷ್ಟು ?

(೧೧) ಜಲಾಶಯಗಳ ಸಂಖ್ಯೆ ಎಷ್ಟು ? ಇವುಗಳಲ್ಲಿರುವ ಮೀನು ಸಂಪನ್ಮೂಲದ ಪ್ರಮಾಣ ಎಷ್ಟು ? ಮತ್ತು ಇದರಿಂದ ಎಷ್ಟು ಹಿಡಿಯಲಾಗುತ್ತಿದೆ ?

ಆ) ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಕ್ರಮಗಳನ್ನು ತೆಗೆದುಕೊಂಡಿರುವಿರಾ ?

ಇ) ಈ ಕೆಳಕಂಡವುಗಳಿಗೆ ಮಾಹಿತಿ ಒದಗಿಸಿ.

೧) ಖಾಸಗಿ ಕೊಳಗಳು.

೨) ಸರ್ಕಾರಿ ಕೆರೆ ಜಲಾಶಯಗಳು.

ಈ) ಮೀನುಗಾರರ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಕೈಗೊಳ್ಳಲಾದ ಕ್ರಮಗಳೇನು ?

ಶ್ರೀ ಸಿ. ಬೈರೇಗೌಡ, (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ಭಾರತ ಸರ್ಕಾರ ಅಂಗವಾದ "ಫಿಷರೀಸ್ ಸರ್ವೆ ಆಫ್ ಇಂಡಿಯಾ" ಎಂಬ ಸಂಸ್ಥೆಯು ನಮ್ಮ ಕರಾವಳಿಯ ಮೀನಿನ ಸಂಪನ್ಮೂಲದ ಸಮೀಕ್ಷೆ ನಡೆಸುತ್ತಿದೆ. ಇನ್ನೂ ಪೂರ್ಣಗೊಂಡಿಲ್ಲ.

(೧) ನಮ್ಮ ರಾಜ್ಯದ ಸುಮಾರು ೨೫೦೦೦ ಚ. ಕಿ. ಮೀಟರುಗಳಲ್ಲಿರುವ ಮೀನು ಸಂಪನ್ಮೂಲದ ಬಗ್ಗೆ ೬೨೫೦ ಚ. ಕಿ. ಮೀ.ಗಳಲ್ಲಿರುವಷ್ಟನ್ನು ಸಧ್ಯದಲ್ಲಿ ಹಿಡಿಯಲಾಗುತ್ತಿದೆ.

(೧೧) ೪೮ ಜಲಾಶಯಗಳು ನಮ್ಮಲ್ಲಿವೆ. ಜೊತೆಗೆ ೨೭೨೨ ಕೆರೆ ಕುಂಟೆಗಳು ನಮ್ಮಲ್ಲಿದ್ದು ಒಟ್ಟು ನೀರಿನ ವಿಸ್ತಾರವು ೪.೫ ಲಕ್ಷ ಹೆಕ್ಟರ್ ನಷ್ಟಿರುವುದು. ಮೀನು ಮರಿಗಳ ಅಭಾವದಿಂದ ಕೇವಲ ಸ್ವಲ್ಪ ವಿಸ್ತಾರವನ್ನು ಮಾತ್ರ ಮೀನುಗಾರಿಕೆ ಅಭಿವೃದ್ಧಿಗೆ ಆಳವಡಿಸಲಾಗುತ್ತಿದೆ.

ಆ) ಹೌದು.

ಇ) ೧) ಸರಿಯಾದ ಮಾಹಿತಿ ಇಲ್ಲ. ಆದರೆ ಖಾಸಗಿ ಕೆರೆ ಹೊಂದಿರುವ ವ್ಯಕ್ತಿಗಳಿಗೆ ಮೀನು ಮರಿ ಮತ್ತು ತಾಂತ್ರಿಕ ಜ್ಞಾನವನ್ನು ನೀಡಲಾಗುತ್ತಿದೆ.

೨) ಸರ್ಕಾರದ ಅಧೀನದಲ್ಲಿರುವ ಕೆರೆ ಕುಂಟೆಗಳನ್ನು ಸಹಕಾರಿ ಸಂಘಗಳ ಮೂಲಕ ಸ್ಥಳೀಯ ಸಂಸ್ಥೆಗಳ ಮೂಲಕ ಮೀನುಗಾರಿಕೆ ಅಭಿವೃದ್ಧಿಗೆ ಆಳವಡಿಸಲಾಗಿದೆ.

ಈ) ಇಲಾಖೆಯಿಂದ ಕರಾವಳಿ ಮತ್ತು ಒಳನಾಡು ಮೀನುಗಾರರ ಅಭಿವೃದ್ಧಿಗಾಗಿ ಕಾರ್ಯಕ್ರಮ ರೂಪಿಸಿದೆ.

ಒಳನಾಡು ಮೀನುಗಾರರಿಗೆ ಸಿ ತಿಂಗಳ ತರಬೇತಿಯನ್ನು ನೀಡಿ ಮೀನುಗಾರರಿಗೆ ಬೇಕಾಗುವ ಸಲಕರಣೆಗಳನ್ನು ರಿಯಾಯಿತಿಯ ಮೇಲೆ ನೀಡುವುದಲ್ಲದೆ, ಮೀನು ಕೃಷಿ ಕೈಗೊಳ್ಳಲು ಕೆರೆಗಳನ್ನು ಆದ್ಯತೆ ಮೇಲೆ ಗುತ್ತಿಗೆಗೆ ನೀಡಲಾಗುತ್ತಿದೆ.

ಕರಾವಳಿ ಮೀನುಗಾರರಿಗೆ ಮೀನು ಹಿಡಿಯಲು ಬೇಕಾಗುವ ಸಲಕರಣೆಗಳನ್ನು ಕೊಳ್ಳಲು ರಿಯಾಯಿತಿಯನ್ನು ನೀಡಲಾಗುತ್ತಿದೆ. ಮತ್ತು ಕರಾವಳಿ ಮೀನುಗಾರರಿಗೆ ಸಂಯುಕ್ತ ವಿಮಾ ಯೋಜನೆಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಶ್ರೀ ಮೊಹಮದ್ ಮೊಹಿನುದ್ದೀನ್.—ಭಾರತ ಸರ್ಕಾರ ಸರ್ವೆ ಮಾಡಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ನಮ್ಮ ಸರ್ಕಾರ ಏತಕ್ಕೆ ಮಾಡಲಿಲ್ಲ ? ಇದರಲ್ಲಿ ಮುಕ್ಕಾಲು ಭಾಗ ಇನ್ನೂ ಹಾರ್ವೆಸ್ಟ್ ಮಾಡಿಲ್ಲ ಅಂದಾಗ ಇದರಿಂದ ನಷ್ಟವಾಗುವ ರೆವಿನ್ಯೂ ಎಷ್ಟು ? ಈ ಕೆಲಸ ಏತಕ್ಕೆ ತಡವಾಗಿದೆ ? ಈ ಯೋಜನೆಯನ್ನು ಯಾವಾಗ ಪೂರ್ಣ ಮಾಡುತ್ತೀರಿ ? ನಿಮ್ಮ ಹತ್ತಿರ ಸಿ೫ ಸಾವಿರ ಟ್ಯಾಂಕುಗಳು ಇವೆ ಎಂದು ಹೇಳಿದ್ದೀರಿ. ಅದರಲ್ಲಿ ಕಾಲು ಭಾಗವನ್ನು ಉಪಯೋಗ ಮಾಡಿಲ್ಲ ಅಂದಾಗ ಇನ್ನೂ ಮುಕ್ಕಾಲು ಭಾಗವನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಏನಾದರೂ ಪ್ರಗತಿಪರವಾದ ಯೋಜನೆ ಇದೆಯೇ ? ಇಲ್ಲವೆ ? ಇದ್ದರೆ ಎಷ್ಟು ದಿನದಲ್ಲಿ ಮಾಡುತ್ತೀರಿ ? ನಮಗೆ ಸೀಡ್ ರಿಕ್ವೈರ್‌ಮೆಂಟ್ ಎಷ್ಟು ? ಎಷ್ಟನ್ನು ಪ್ರೊವೈಡ್ ಮಾಡುತ್ತೀರಿ ? ಇದರ ಮೇಲೆ ಅನಾಲಿಸಿಸ್ ಮಾಡಿದ್ದೀರಾ ? You have stated that the information with regard to number of private owned tanks is not available. However, they are assisted in the development of fisheries by supply in fish seeds. How many tanks you are assisting ? When you don"t have the information with regard to the number of private owned tanks, how you can assist them ? There is a Corporation. Whethre it is functioning * You have also not mentioned about the Marketing facilities and housing facilities for the Fishermen. What action you have taken for the marketing facilities and housing facilities for the fishermen ? ಇದರಲ್ಲಿ ಮಾರ್ಕೆಟಿಂಗ್ ಫೆಸಿಲಿಟೀಸ್ ಏನು ಮಾಡಿದ್ದೀರೆಂದು ಹೇಳಿಲ್ಲ. ಫಿಷರ್‌ಮೆನ್‌ಗಳಿಗೆ ಹೌಸಿಂಗ್ ಫೆಸಿಲಿಟೀಸ್ ಮಾಡಿದ್ದೀರಾ ಇಲ್ಲವೆ ಎಂಬುದನ್ನು ಹೇಳಲಿಲ್ಲ.

ಶ್ರೀ ಸಿ. ಬೈರೇಗೌಡ.—ಇದು ದೊಡ್ಡ ಪ್ರಶ್ನೆ ಆಗುತ್ತದೆ. ಫಿಷರೀಸ್ ಸರ್ವೆ ಆಫ್ ಇಂಡಿಯಾ ಎಂಬ ಸಂಸ್ಥೆ ಕೇಂದ್ರ ಸರ್ಕಾರದಲ್ಲಿದೆ. ಅದು ದೊಡ್ಡ ಪ್ರಮಾಣದ ಹಡಗುಗಳ ವ್ಯವಸ್ಥೆ ಮಾಡುತ್ತದೆ. ಆಳ ಸಮುದ್ರದ ಮೀನುಗಾರಿಕೆಯನ್ನು ಕಂಡು ಹಿಡಿಯಬೇಕಾದರೆ ದೊಡ್ಡ ಪ್ರಮಾಣದ ಹಡಗುಗಳು ಬೇಕಾಗುತ್ತವೆ. ಅಂಥ ಪರಿಸ್ಥಿತಿಯಲ್ಲಿ ಇದು ರಾಜ್ಯ ಸರ್ಕಾರದ ಇತಿಮಿತಿಯಲ್ಲಿ ಸಾಧ್ಯವಿಲ್ಲದ ಕಾರಣದಿಂದ ಈ ಕಾರ್ಯವನ್ನು ನಾವು ಕೈಗೊಂಡಿಲ್ಲ. ಕೇವಲ ನಮ್ಮ ಕರಾವಳಿಯಲ್ಲಿ ಮಾತ್ರ ಈ ರೀತಿ ಸರ್ವೆ ಮಾಡುವುದಕ್ಕಾಗುವುದಿಲ್ಲ. ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕಾಗುತ್ತದೆ. ಪಶ್ಚಿಮ ಮತ್ತು ಪೂರ್ವ ಕರಾವಳಿಯಲ್ಲಿ ಸರ್ವೆ ಮಾಡಬೇಕಾಗುತ್ತದೆ. ಆದಕಾರಣ ಈ ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಇದನ್ನು ನಾವು ಮಾಡುವುದಕ್ಕೆ ಸಾಧ್ಯವಿಲ್ಲ, ಕೆಲವು ಮೀನು ಉತ್ಪಾದನೆ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದೆ. ನಮ್ಮ ಕರಾವಳಿಯಿಂದ ಎಕ್ಸ್‌ಕ್ಲೂಸೀವ್ ಇಕನಾಮಿಕ್ ಜೋನ್ ಎಂದು ೨೦೦ ಕಿ.ಮೀ.ವರೆಗೆ ಮೀನುಗಾರಿಕೆ ನಡೆಸುವ ಹಕ್ಕಿದೆ. ನಮ್ಮಲ್ಲಿ ದೊಡ್ಡ ಪ್ರಮಾಣದ ಹಡಗು ಇಲ್ಲದಿರುವುದರಿಂದ ನಮಗೆ ಅಭ್ಯವಿರತಕ್ಕ ಸಂಪತ್ತನ್ನು ರೂಢಿಸತಕ್ಕ ಪರಿಸ್ಥಿತಿಯಲ್ಲಿ ನಾವಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಕರ್ನಾಟಕ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯ ರಾ ಸರ್ಕಾರದ ಅಂಗ

ಸಂಸ್ಥೆಯಾಗಿದೆ. ಅದು ಎರಡೂ ಕಡೆಯಿಂದ ಸಹಾಯ ಪಡೆದು ಆಳ ಸಮುದ್ರದ ಮತ್ತು ತೀರ ಸಮುದ್ರದ ಮೀನುಗಾರಿಕೆಯನ್ನು ನಡೆಸಬೇಕೆಂಬ ಪ್ರಯತ್ನ ಮಾಡಿದೆ. ಆ ದಿಸೆಯಲ್ಲಿ ಅದು ಕೆಲಸ ಕೆಲಸ ಮಾಡುತ್ತಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಒಳನಾಡು ಮೀನುಗಾರಿಕೆ ನವಂಗೆ ಬೇಕಾಗಿರುವುದು ಎಂಭತ್ತು ಕೋಟಿ ಮೀನು ಮರಿ ಬೇಕಾಗಿದೆ. ಆದರೆ ನಮ್ಮಲ್ಲಿ ಕೇವಲ ೧೫–೧೬ ಕೋಟಿ ಮೀನುಮರಿಯನ್ನು ಉತ್ಪಾದನೆ ಮಾಡತಕ್ಕಂಥ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ಇದರಲ್ಲಿ ನಾನಾ ಕಾರಣಗಳಿವೆ. ಕೆಲವು ಉತ್ಪಾದನೆಗೆ ವರ್ಷಗಳು ಹೆಚ್ಚಾಗುತ್ತವೆ, ಕೆಲವು ವರ್ಷಗಳು ಕಡಿಮೆಯಾಗುತ್ತವೆ. ಆದರೂ ಸಹ ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು ಒಳನಾಡು ಮೀನುಗಾರಿಕೆಗೆ ಈ ಅಭಿವೃದ್ಧಿ ನಿಗಮವು ಮೀನುಮರಿಯ ಉತ್ಪಾದನೆಯನ್ನು ಮಾಡುವ ಜವಾಬ್ದಾರಿಯನ್ನು ವಹಿಸಿ ಸೂಕ್ತ ಕಾರ್ಯಕ್ರಮವನ್ನು ಹಾಕಿದ್ದೇವೆ. ಕೆಲವು ದಿನಗಳ ಹಿಂದೆ ಇದಕ್ಕಾಗಿ ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದ್ದೇವೆ. ಮತ್ತೆ ಮೀನುಗಾರರಿಗೆ ಬೇಕಾಗಿರತಕ್ಕಂಥ ಸವಲತ್ತುಗಳನ್ನು ಕೊಡುತ್ತಿದ್ದೇವೆ. ಅದರಲ್ಲಿ ಅವರಿಗೆ ಇನ್‌ಷ್ಯೂರೆನ್ಸ್ ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ, ಪ್ರತಿಯೊಬ್ಬ ಮೀನುಗಾರರೂ ೧೫ ಸಾವಿರ ರೂಪಾಯಿಗಳ ಇನ್‌ಷ್ಯೂರೆನ್ಸ್‌ನ್ನು ಕೊಡತಕ್ಕಂಥ ಏರ್ಪಾಡನ್ನು ಕೂಡ ಮಾಡುತ್ತಿದ್ದೇವೆ.

ಇನ್ನು ಖಾಸಗಿ ಕೊಳಗಳ ಬಗ್ಗೆ ಕೇಳಿದ್ದೀರಿ. ಮೀನುಗಾರಿಕೆಗೋಸ್ಕರ ಕೊಳಗಳನ್ನು ನಿರ್ಮಿಸಲಿಕ್ಕೆ ಯಾರಾದರೂ ಮುಂದೆ ಬಂದು ನಲವತ್ತು ಸಾವಿರ ರೂಪಾಯಿ ಕೊಳವನ್ನು ಕಟ್ಟಿದರೆ ಅವರಿಗೆ ನಾವು ರಿಯಾಯಿತಿಯಾಗಿ ಹತ್ತು ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡತಕ್ಕಂಥ ಕಾರ್ಯಕ್ರಮ ಇದೆ. ಇದರ ಬಗ್ಗೆ ಸಧ್ಯಕ್ಕೆ ನನ್ನ ಹತ್ತಿರ ಲೆಕ್ಕ ಇಲ್ಲ. ಮಾನ್ಯ ಸದಸ್ಯರಿಗೆ ಇದನ್ನು ಒದಗಿಸತಕ್ಕಂಥ ಏರ್ಪಾಡನ್ನು ನಾವು ಮಾಡುತ್ತೇವೆ.

ಪ್ರವಾಸಿ ಕೇಂದ್ರವಾಗಿ ಜೋಗ್ ಜಲಪಾತ

(೪೮೬) ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ವಾರ್ತಾ ಪ್ರವಾಸೋದ್ಯಮ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಜೋಗ್ ಜಲಪಾತವು ಪ್ರಪಂಚದಲ್ಲೇ ಅತಿ ಸುಂದರವಾದ ಹಾಗೂ ಎತ್ತರವಾದ ಜಲಪಾತವೆಂದು ಪ್ರಸಿದ್ಧಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

ಆ) ಜೋಗ್ ಜಲಪಾತವನ್ನು ಜಗತ್ ಪ್ರಸಿದ್ಧಿಯಾದ ಪ್ರವಾಸಿ ಕೇಂದ್ರವೆಂದು ಅಭಿವೃದ್ಧಿ ಪಡಿಸಲಾಗುವುದೇ ?

ಇ) ಲಿಂಗನಮಕ್ಕಿ ಜಲಾಶಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಶೇಕಡಾ ನೂರರಷ್ಟು ನೀರನ್ನು ತಡೆಹಿಡಿದುದರಿಂದ ಜೋಗ್ ಜಲಪಾತವು ಕಣ್ಮರೆಯಾಗುತ್ತಿರುವ ವಿಷಯ ನಿಜವೇ ?

ಈ) ಹಾಗಿದ್ದಲ್ಲಿ ಜೋಗ್ ಜಲಪಾತಕ್ಕೆ ನೀರನ್ನು ಪುನರ್ ಶೇಖರಿಸುವುದಕ್ಕೆ ಹಾಗೂ ಅದನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆಯು ಯಾವ ಕ್ರಮವನ್ನು ಕೈಗೊಂಡಿರುವುದು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಯುವಜನ ಸೇವಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಮತ್ತು ಕ್ರೀಡಾ ರಾಜ್ಯ ಸಚಿವರು).—

ಅ) ಹೌದು

ಆ) ವಿದೇಶಿ ಹಾಗೂ ದೇಶಿಯ ಪ್ರವಾಸಿಗರನ್ನು ಆಕರ್ಷಿಸಲು ಬೇಕಾಗುವಂತಹ ಮೂಲ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಕರ್ನಾಟಕ ಪ್ರವಾಸೋದ್ಯಮವು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ.

ಇ) ಜಲಪಾತದಲ್ಲಿ ಧುಮುಕುವ ನೀರಿನ ಮಾತ್ರ ಗಣನೀಯವಾಗಿ ಕಡಿಮೆಯಾಗಿದೆ.